ಶ್ರೀ ಹೆಚ್. ಎನ್. ಶಂಕರಲಿಂಗೇಗೌಡ : ಮಾನ್ಯ ಸಚಿವರು ಈ ವಿಷಯದ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಯಾವ ಯಾವ ಬೋರ್‌ವೆಲ್‌ಗಳಲ್ಲಿ ಫ್ಲೋರೈಡ್ ಅಂಶ ಜಾಸ್ತಿಯಿದೆಯೋ ಅಂತಹವುಗಳನ್ನು ಮುಚ್ಚುವಂತಹ ಕೆಲಸವನ್ನು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಪುರಸಭೆಗಳ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಮನೆಗಳನ್ನು ಸಕ್ರಮಗೊಳಿಸುವ ಬಗ್ಗೆ.

203 (1908) : ಶ್ರೀ ಮಹದೇವ ಪ್ರಸಾದ್ ಹೆಚ್. ಎಸ್. (ಗುಂಡ್ಲುಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮನೆ, ಗುಡಿಸಲು ಹಾಕಿಕೊಂಡಿರುವವರಿಗೆ ಸಕ್ರಮಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ;

(ಆ) ಹಾಗಿದ್ದರೆ, ಇದಕ್ಕೆ ಸಮಿತಿ ರಚಿಸಲಾಗಿದೆಯೇ;

(ಇ) ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿರುವವರ ಸಂಖ್ಯೆ ಎಷ್ಟು;

(ಈ) ಇವುಗಳನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಹೌದು.

(ಆ) ಕರ್ನಾಟಕ ನಗರ ಪ್ರದೇಶಗಳಲ್ಲಿನ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ಕಾಯ್ದೆ 1995ರ ಕಲಂ 6ರ ಉಪಕಲಂ (1)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಗಳನ್ನು ನೇಮಿಸಲಾಗಿದೆ.

(ಇ) 93

(ಈ) ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಪುರಸಭೆ ವ್ಯಾಪ್ತಿಯಲ್ಲಿ ಅಕ್ರಮವಾಗಿ ಮನೆ, ಗುಡಿಸಲು ಹಾಕಿಕೊಂಡಿರುವವರಿಗೆ ಸಕ್ರಮಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ ಎಂಬ ನನ್ನ ಪ್ರಶ್ನೆಗೆ ಮಾನ್ಯ ಸಚಿವರು 'ಹೌದು' ಎಂದು ಉತ್ತರಿಸಿದ್ದಾರೆ. ಅದಕ್ಕಾಗಿ 1995ರ ಕಾಯ್ದೆಯ ಕಲಂ - 6ರ ಉಪ - ಕಲಂ (1)ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಗಳನ್ನೂ ಕೂಡ ರಚಿಸಲಾಗಿದೆ ಎಂದು ಮಾನ್ಯ ಸಚಿವರು ತಿಳಿಸಿರುತ್ತಾರೆ. 1995ರಲ್ಲೇ ಸಕ್ಷಮ ಪ್ರಾಧಿಕಾರ ರಚಿಸಿ, ಅಕ್ರಮವಾಗಿ ಮನೆ, ಗುಡಿಸಲು ಹಾಕಿಕೊಂಡಿರುವವರಿಂದ ಅರ್ಜಿಗಳನ್ನೂ ಕೂಡ ಸ್ವೀಕರಿಸಲಾಗಿದೆ. ಆದರೆ ಸುಮಾರು 5-6 ವರ್ಷಗಳಾದರೂ ಕೂಡ

ಅವುಗಳನ್ನು ಸಕ್ರಮಗೊಳಿಸದೇ ಉಳಿಸಿರುವ ಸರ್ಕಾರದ ಉದ್ದೇಶವಾದರೂ ಏನು ಎಂದು ನಾವು ಕೇಳಬೇಕಾಗುತ್ತದೆ. ಈ ಪ್ರಾಧಿಕಾರ ಏನು ಕೆಲಸ ಮಾಡುತ್ತಿದೆ ಎಂಬುದನ್ನೂ ನಾನು ಕೇಳಬಯಸುತ್ತೇನೆ. ಸುಮಾರು 1974-75ರಿಂದ ಈ ರೀತಿ ಅಕ್ರಮವಾಗಿ ಮುನಿಸಿಪಲ್ ಅಸೆಸ್‌ಮೆಂಟ್‌ನಲ್ಲಿ ಇರುವಂತಹ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಇವರಿಗೆ ಪುರಸಭೆಯಿಂದ ದೀಪ, ನೀರು ನೈರ್ಮಲ್ಯದ ಎಲ್ಲಾ ಸವಲತ್ತುಗಳೂ ಲಭ್ಯವಾಗುತ್ತಿವೆ. ಆದರೆ ಪುರಸಭೆಗೆ ಅವರಿಂದ ಯಾವುದೇ ಕಂದಾಯ ಪಾವತಿಯಾಗುತ್ತಿಲ್ಲ. ಈ ರೀತಿ ನಿಧಾನ ಮಾಡುತ್ತಿರುವುದರಿಂದ ಪುರಸಭೆಗೆ ಬರುವ ಆದಾಯವೂ ಕೂಡ ಹೋಗುತ್ತಿದೆ. ಇದರ ಜೊತೆಗೆ ಅವರಿಗೂ ಕೂಡ ಅಸೆಸ್‌ಮೆಂಟ್‌ಗೆ ಸೇರಿ ಅವರದೇ ಆದ ಖಾತೆ ಹೊಂದುವುದಕ್ಕೂ ತೊಂದರೆಯಾಗಿದೆ. ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಇವುಗಳನ್ನು ಸಕ್ರಮಗೊಳಿಸಬೇಕೆಂದು ಕೋರುತ್ತೇನೆ. ಈಗಾಗಲೇ 5-6 ವರ್ಷಗಳಾಗಿರುವುದರಿಂದ, ನಿರ್ದಿಷ್ಟವಾಗಿ ಯಾವಾಗ ಅವುಗಳನ್ನು ಸಕ್ರಮಗೊಳಿಸಲಾಗುವುದು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಚಾಮರಾಜನಗರದ ಜಿಲ್ಲಾಧಿಕಾರಿಗಳು ಪುರಸಭೆಯ ವ್ಯಾಪ್ತಿಯ ಅಕ್ರಮವನ್ನು ಸಕ್ರಮಗೊಳಿಸಲು ನೀವು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರನ್ನು ಕೇಳಬೇಕೆಂದು ಹೇಳುತ್ತಾರೆ. ಆದರೆ ನಿಮ್ಮ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರ ಜಿಲ್ಲಾಧಿಕಾರಿಗಳಿಗೇ ಆ ಅಧಿಕಾರವನ್ನು ಕೊಟ್ಟಿರುತ್ತೀರಿ. ಆದರೂ ಕೂಡ ಈ ಒಂದು ಜಿಜ್ಞಾಸೆಯಲ್ಲೇ ಈ ತರಹದ ಹಲವಾರು ಪ್ರಕರಣಗಳು ಬಾಕಿ ಉಳಿದುಕೊಂಡಿವೆ. ಇದರ ಬಗ್ಗೆ ಸರ್ಕಾರ ತುರ್ತಾಗಿ ಕ್ರಮ ಕೈಗೊಂಡು ಒಂದು ನಿರ್ದಿಷ್ಟ ಅವಧಿಯಲ್ಲಿ ಸಕ್ರಮಗೊಳಿಸುವ ಬಗ್ಗೆ ಭರವಸೆ ನೀಡಬೇಕೆಂದು ಕೋರುತ್ತೇನೆ.

ಶ್ರೀ ಹೆಚ್. ಎನ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಅನಧಿಕೃತ ಕಟ್ಟಡಗಳ ಅನಭಿಷಿಕ್ತ ದೊರೆಗಳು. ಅದನ್ನು ಪೋಷಿಸಿದವರೂ ಅದನ್ನು ಉಳಿಸಿದವರೂ. ಅದನ್ನು ಇವತ್ತು ಒಡೆಯಲಿಕ್ಕೆ ಹೊರಟಿರತಕ್ಕಂಥವರೂ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಅನಧಿಕೃತ ಬಡಾವಣೆಯನ್ನು ಈಗ ಒಡೆಯಲಿಕ್ಕೆ ಹೊರಟಿದ್ದಾರೆ. ಇದನ್ನು ಯಾವ ರೀತಿ.....

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೇ, ಇದೇನಿದು? ಮಾನ್ಯ ಸದಸ್ಯರು ಮಾತನಾಡುವಾಗ ಸಾಕ್ಷ್ಯಾಧಾರ ಇಟ್ಟುಕೊಂಡು ಮಾತನಾಡಬೇಕು. ನೀವು ಈಗ ಎಲ್ಲದಕ್ಕೂ ಕಾಂಗ್ರೆಸ್ಸಿಗರೇ ಕಾರಣ ಎಂದು ಹೇಳಿದಿರಿ. ಅದರ ಬಗ್ಗೆ ನಿಮ್ಮ ಬಳಿ ಅಂಕಿ ಅಂಶಗಳೇನಾದರೂ ಇದೆಯೇ? ಅವುಗಳು ಇಲ್ಲದಿದ್ದಲ್ಲಿ ಸುಮ್ಮನೆ ಈ ರೀತಿಯಾಗಿ ಏಕೆ ಮಾತನಾಡುತ್ತೀರಿ?

ಶ್ರೀ ಹೆಚ್. ಎನ್. ಶಂಕರಲಿಂಗೇಗೌಡ : ನಿರ್ದಿಷ್ಟವಾಗಿರುವುದನ್ನೇ ನಾನು ಈಗ ಇಲ್ಲಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ಹಾಗಾದರೆ ಅದರ ವಿವರ ಕೊಡಿ. ನಿಮ್ಮ ಮೈಸೂರು ಪಟ್ಟಣದಲ್ಲಿ ಯಾರ್ಯಾರು ಎಷ್ಟೆಷ್ಟು ಅನಧಿಕೃತ ಕಟ್ಟಡ ಮಾಡಿದ್ದಾರೆ ಎಂದು ವಿವರ ಇದ್ದರೆ ಹೇಳಿ. ಅದನ್ನು ಬಿಟ್ಟು ಈ ರೀತಿ ಸುಮ್ಮನೆ ಹೇಳಬಾರದು. ನಾನು ಈ ರೀತಿಯ ಅನಗತ್ಯವಾದ ಹೇಳಿಕೆಗಳನ್ನು ಅಂಗೀಕರಿಸುವುದಿಲ್ಲ.

ಶ್ರೀ ಎಂ. ಮಹದೇವ : ಮಾನ್ಯ ಅಧ್ಯಕ್ಷರೆ, ಆ ಪದವನ್ನು ಕಡತದಿಂದ ತೆಗೆಸಿರಿ.

ಅಧ್ಯಕ್ಷರು : ಆಯಿತು. ಆ ಪದವನ್ನು ಕಡತದಿಂದ ತೆಗೆದು ಹಾಕಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಸುಮಾರು 93 ಅರ್ಜಿಗಳು ಸಕ್ರಮಗೊಳಿಸಲು ಪೆಂಡಿಂಗ್ ಇದೆ. ಬಹಳ ವರ್ಷಗಳಿಂದ ಅದನ್ನು ಡಿಸ್ಪೋಸ್ ಮಾಡಿಲ್ಲ. ಇಲ್ಲಿ ಸಕ್ರಮಗೊಳಿಸುವಲ್ಲಿ ತಡವಾಗಿದೆ ಎಂಬುದನ್ನು ನಾನೂ ಸಹಾ ಒಪ್ಪಿಕೊಳ್ಳುತ್ತೇನೆ. ಮೊದಲು ಅದು ಮೈಸೂರು ಜಿಲ್ಲೆ ಆಗಿತ್ತು, ನಂತರ ಪ್ರತ್ಯೇಕವಾಗಿ ಚಾಮರಾಜನಗರ ಎಂಬ ಜಿಲ್ಲೆ ರಚಿಸಲಾಯಿತು. ಈ ರೀತಿ ಆಡಳಿತಾತ್ಮಕವಾಗಿ ಬದಲಾವಣೆಯಾದಾಗ ಕಡತಗಳನ್ನು ಅಲ್ಲಿಂದ ಇಲ್ಲಿಗೆ ಕಳುಹಿಸುವಲ್ಲಿ ಸ್ವಲ್ಪ ತಡವಾಗಿದೆ. ಈಗಾಗಲೇ ಅಲ್ಲಿ 25.8.97ರಂದು ಸಕ್ಷಮ ಪ್ರಾಧಿಕಾರವನ್ನು ರಚಿಸಲಾಗಿದೆ. ಆ ಪ್ರಾಧಿಕಾರದ ಮೂಲಕ ಬಾಕಿ ಇರುವ 93 ಅರ್ಜಿಗಳ ಬಗ್ಗೆ ಆದಷ್ಟು ಬೇಗನೆ ಅಂದರೆ ಒಂದು ತಿಂಗಳೊಳಗಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತದೆ ಎಂದು ತಿಳಿಸಬಯಸುತ್ತೇನೆ. ಈಗಾಗಲೇ ಅನಧಿಕೃತವಾಗಿ ಕಟ್ಟಿರತಕ್ಕಂಥ ಕಟ್ಟಡಗಳಿಗೆ ಪುರಸಭೆ ಮತಿಯಿಂದ ನೀರು, ರಸ್ತೆ, ವಿದ್ಯುತ್ ಮುಂತಾದ ಎಲ್ಲಾ ಸವಲತ್ತುಗಳನ್ನೂ ಕೊಟ್ಟಿರುತ್ತೇವೆ. ಆದರೆ ಈಗ ಅದನ್ನು ರೆಗ್ಯೂಲರೈಸ್ ಮಾಡಬೇಕಾಗಿದೆ. ಇಡೀ ರಾಜ್ಯಾದ್ಯಂತ ರೆಗ್ಯೂಲರೈಸ್ ಮಾಡತಕ್ಕ ಕ್ರಮವನ್ನು ಸರ್ಕಾರ ಈಗ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಸಚಿವರಿಗೆ ಧನ್ಯವಾದಗಳು. ಆದರೆ ಪ್ರಾಧಿಕಾರದಲ್ಲಿ ಯಾರ್ಯಾರು ಸದಸ್ಯರಿರುತ್ತಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸುತ್ತಾರೆಯೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಕೆಲವು ಅನಧಿಕೃತ ಕಟ್ಟಡಗಳನ್ನು ಬಿ. ಡಿ. ಎ. ನವರು ನಾಳೆ ಒಡೆಯುತ್ತಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ತಾವು ಬೇರೆ ಯಾವುದಾದರೂ ನಿಯಮದಡಿ ಪ್ರಸ್ತಾವಿಸಲು ನೋಟೀಸ್ ಕಳುಹಿಸಿಕೊಡಿ. ಆಗ ನಾನು ಅದನ್ನು ಅಡ್ಮಿಟ್ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಪ್ರಾಧಿಕಾರದಲ್ಲಿ ಯಾರು ಸದಸ್ಯರಿರುತ್ತಾರೆ ಎಂದು ಮಾನ್ಯ ಸಚಿವರು ಹೇಳಲೇ ಇಲ್ಲ..

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮುಖ್ಯವಾಗಿ ಅದರಲ್ಲಿ ಡಿ. ಸಿ. ಯವರೇ ಇರುತ್ತಾರೆ.